ನ್ಯೂಟ್ರಿಷನ್ ಪ್ರೋಗ್ರಾಂ ಎಂದು ಮಾಡಿ ಇದಕ್ಕೆ ಹೆಣ ಕೂಡೆ ಮುಂಜೂರು ಮಾಡಿದ್ದಾರೆ. ಇದರಂತೆ 0—3 ವರ್ಷಗಳ ವಯಸ್ಸಿನ ಹುಡುಗರ ಆರೋಗ್ಯವನ್ನು ನೋಡಲು ಅನುಕೂಲವಾಗುವಂತೆ ಒಂದು ಸರ್ವೇ ಕೆಲಸ ಮಾಡಿ ಇದಕ್ಕೆ ಎರಡು ಏರಿಯಾಗಳನ್ನು ಚುನಾಯಿಸಿದ್ದಾರೆ. ಒಂದು ಅರ್ಬನ್ ಏರಿಯಾದಲ್ಲಿ ಮತ್ತು ಇನ್ನೊಂದು ಟ್ರೈಬಲ್ ಏರಿಯಾದಲ್ಲಿ ಮಕ್ಕಳ ಆರೋಗ್ಯವನ್ನು ನೋಡಬೇಕೆಂದು ಸರಕಾರದ ಒಂದು ಆರ್ಡರೂ ಕೂಡ ಆಗಿದೆ. ಇದನ್ನು ಸಭೆಯ ಅವಗಾಹನೆಗಾಗಿ ಈ ಸಭೆಯ ಮೇಜಿನ ಮೇಲೆ ಇಡುತ್ತೇನೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಈಗಿರತಕ್ಕ ಸಂಸ್ಥೆಗಳಿಂದ ಹೆಚ್ಚು ಸಹಾಯ ಮಕ್ಕಳಿಗೆ ದೊರಕುತ್ತಿಲ್ಲ. ಇದಕ್ಕಾಗಿ ಪ್ರತಿಯೊಂದು ಹೋಬಳಿಯಲ್ಲಿರುವ ಇಂತಹ ಮಕ್ಕಳ ಅನುಕೂಲಕ್ಕಾಗಿ ಸರಕಾರ ಇನ್ನೂ ಹೆಚ್ಚು ಸಹಾಯ ಮಾಡಲು ಮನಸ್ಸು ಮಾಡುತ್ತಾರೆಯೇ ?

ಶ್ರೀಮತಿ ಬನವರಾಜೇಶ್ವರಿ.—ಈಗಾಗಲೇ ನಾನು ಹೇಳಿದಂತೆ ಐ ಎನ್ ಟಿ ಪ್ರೋಗ್ರಾಂ ಎಂದು ಮಾಡಿದ್ದಾರೆ. ಇದರ ಮೂಲಕ ರಾಜ್ಯದಲ್ಲಿ ಇಂತಹ ಸಂಸ್ಥೆಗಳಿಗೆ ಸಹಾಯ ಸಿಗುತ್ತಿದೆ. ಇದರ ಬಗ್ಗೆ ಹೆಚ್ಚು ಖರ್ಚು ತಗಲುತ್ತದೆ ಎಂದು ನಾವು ಕೇಂದ್ರ ಸರಕಾರಕ್ಕೆ ತಿಳಿಸಿದ ಮೇಲೆ ಅವರು ಇದಕ್ಕೆ ತಕ್ಕಷ್ಟು ಹಣ ಸಹಾಯ ಮಾಡಿ ಇದನ್ನು ಕಾರ್ಯಗತ ಮಾಡಲು ಸಹಾಯ ಮಾಡುತ್ತಿದ್ದಾರೆ.

ಶ್ರೀ ಎಂ.ಹೆಚ್. ಜಯಪ್ರಕಾಶ ನಾರಾಯಣ್.—3-9 ವರ್ಷ ವಯಸ್ಸುಳ್ಳ ಮಕ್ಕಳಿಗೆ ಹೊಟ್ಟೆ ತುಂಬಾ ಅನ್ನ ಮತ್ತು ಮೈ ತುಂಬಾ ಬಟ್ಟೆ ಇಂತಹ ಸತ್ಕಾರ್ಯಗಳನ್ನು ಒದಗಿಸುವ ವಿಚಾರದಲ್ಲಿ ಸರಕಾರ ಏನಾದರೂ ಸರ್ವೇ ಮಾಡಿದೆಯೇ ? ಈಗ ಎಷ್ಟೋ ಮಕ್ಕಳು ಬೀದಿ ಭಿಕಾರಿಗಳಾಗಿರುವುದರಿಂದ ಇಂತಹ ಯೋಜನೆಯನ್ನು ಸಾಮೂಹಿಕವಾಗಿ ಎಲ್ಲರಿಗೂ ಅನುಕೂಲವಾಗುವಂತೆ ಮಾಡಲು ವ್ಯವಸ್ಥೆ ಮಾಡುತ್ತೀರಾ ?

ಶ್ರೀಮತಿ ಬನವರಾಜೇಶ್ವರಿ.—ಇಂಡಿಯನ್ ಮೆಡಿಕಲ್ ರೀಸರ್ಚ್‌ನವರು ಹತ್ತು ವರ್ಷದೊಳಗಡೆ ಇರುವ ಮಕ್ಕಳಿಗೆ ಶೇಕಡಾ 50ರಷ್ಟು ನ್ಯೂಟ್ರಿಷನ್ ಕೊರತೆ ಇದೆ ಎಂದು ಹೇಳಿ ಅವರು ವರದಿ ಕಳುಹಿಸಿದ್ದಾರೆ. ಇದಕ್ಕಾಗಿ ಕೇಂದ್ರ ಸರಕಾರ ಎರಡು ಏರಿಯಾದಲ್ಲಿ ಎಂದರೆ ಅರ್ಬನ್ ಏರಿಯಾ ಹಾಗೂ ಟ್ರೈಬಲ್ ಏರಿಯಾದಲ್ಲಿ ಇದರ ಬಗ್ಗೆ ಕೆಲವು ಕೆಲಸಗಳನ್ನು ಮಾಡಿ ಅನುಕೂಲ ಮಾಡಬೇಕೆಂದು ಇದ್ದಾರೆ.

Sri D. B. KALMANKAR.—May I know whether the Social Welfare Department of the State will gather the statistics of such children ?

ಶ್ರೀಮತಿ ಬನವರಾಜೇಶ್ವರಿ.—ಸೋಷಿಯಲ್ ವೆಲ್‌ಫೇರು ಇಲಾಖೆಯವರು ಈಗಾಗಲೇ ಸರ್ವೇ ಮಾಡಿ ಇದರ ಬಗ್ಗೆ ತಕ್ಕ ಅಂಕೆ ಸಂಖ್ಯೆಗಳನ್ನು ತಯಾರು ಮಾಡಿದ್ದಾರೆ. ನುಮಾರು ನಮ್ಮ ರಾಜ್ಯದಲ್ಲಿ 12 ಲಕ್ಷ ಮಕ್ಕಳು ಇದ್ದಾರೆ. ಮತ್ತು ಇದರಲ್ಲಿ ಫ್ರೀ ಸ್ಕೂಲ್ ಗೊಯಿಂಗ್ ಮಕ್ಕಳು 8 ಲಕ್ಷದಷ್ಟು ಇದ್ದಾರೆ ಮತ್ತು ಸ್ಕೂಲ್ ಗೋಯಿಂಗು ಮಕ್ಕಳು ನುಮಾರು ನಾಲ್ಕು ಲಕ್ಷದಷ್ಟು ಇದ್ದಾರೆ.

Outstanding arrears from State Marketing society

28. Sri C. K. RAJAIAH SHETTY (Chicknaikanahalli).—

Will the Minister for Development be pleased to state.—

(*a*) the outstanding arrears from State Marketing Society due to Government from 1960-61 to 1968-69 (yearwise figures may be furnished) ;

(*b*) whether Government stood guarantee for the loans raised by the Society from Banks; if so, for how much and whether these loans were paid back on due dates;

(SRI C. K. RAJAIAH SHETTY)

(*c*) the interest paid by Government to the Reserve Bank of India for loans taken by the Society up to 1-4-1969;

(*d*) the total assets and liabilities of the society as on 31-3-1969;

(*e*) whether short-term loans were also raised by Government from Central Government for procurement of fertilisers; if so, the interest paid up to 30-3-1969 on behalf of the society ?

Sri P. M. NADGOUDA (Minister for Development).—

(*a*)	1960-61	61,29,353
	1961-62	39,25,250
	1962-63	96,57,366
	1963-64	1,15,86,694
	1964-65	1,48,30,180
	1965-66	1,56,81,445
	1966-67	2,08,72,188
	1967-68	3,64,50,747
	1968-69	Nil (4,13,66,021 excess paid).

(*b*) Yes, for a total of Rs. 11.5 crores to 5 banks. Entire amounts were paid back on due dates.

(*c*) Nil.

(*d*) Liabilities Rs. 31,73,36,698·49
Assets Rs. 31,66,48,086·42
Net loss Rs. 6,88,612.07

(*e*) Nil.

Sri C. K. RAJAIAH SHETTY.—Is it not a fact that Government went on adjusting the money to share capital as Government's share and thereby they paid more money ?

Sri P. M. NADGOUDA.—Though it is a fact that it is only an adjustment, the whole thing is paid by the Marketing Society.

Sri C. K. RAJAIAH SHETTY.—Is it not a fact that the figures in respect of liabilities and assets shown in the answer is only the book value and not the actual ones ?

Sri P. M. NADGOUDA.—Final verification of accounts is being conducted and it cannot be said exactly what is the loss.

ಶ್ರೀ ಟಿ. ಆರ್. ಶಾಮಣ್ಣ.—ಈ ಸೊಸೈಟಿಗಳ ಬಗ್ಗೆ ಬೇಕಾದಷ್ಟು ದೂರುಗಳು ಇವೆ. ಮತ್ತು ಬೇಕಾದಷ್ಟು ಹಣ ದುರುಪಯೋಗವಾಗುತ್ತಿದೆ. ಇಲ್ಲಿ (ಈ) ಪ್ರಶ್ನೆಗೆ ಉತ್ತರವಾಗಿ 6 ಲಕ್ಷ ಚಿಲ್ಲರೆ ಹಣ ನಷ್ಟವಾಗಿದೆ ಎಂದು ಹೇಳಿದ್ದೀರಿ. ಈ ಬಗ್ಗೆ ವಿಚಾರಣೆ ನಡೆಸಿ ಇದಕ್ಕೆ ಯಾರು ಕಾರಣ ಕರ್ತರೋ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂಬ ಭರವಸೆಯನ್ನು ಕೊಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಇಲ್ಲಿ ನಷ್ಟವಗ್ಯೈರೆ ಆಗಿದೆ ಎಂದು ಈಗ ಹೇಳುವುದಕ್ಕೆ ಬರುವುದಿಲ್ಲ 1960ರಿಂದ ಗೊಬ್ಬರ ವಾರಾಟದ ಕೆಲಸವನ್ನು ಈ ಸಂಘಕ್ಕೆ ವಹಿಸಿಕೊಡಲಾಗಿದೆ. ಇನ್ನೂ ರೀಕನ್ ಸಿಲಿಯೇಷನ್ ಮಾಡುವುದು ಇದೆ. ಅದು ಆದಮೇಲೆ ಏನಾದರೂ ನಷ್ಟವಾಗಿದ್ದರೆ ಆ ಬಗ್ಗೆ ಸರ್ಕಾರದವರು ವಿಚಾರ ಮಾಡುತ್ತಾರೆ.

Sri H. SIDDAVEERAPPA.—Will the Government be pleased to place on the Table of the House the details of assets and liabilities of this society ?

Sri P. M. NADGOUDA.—After the whole thing is examined, I will place it.

Sri H. SIDDAVEERAPPA.—What is the harm in placing these details now before the House ? How could you place this list without reconciliation ?

ಶ್ರೀ ಪಿ. ಎಂ. ನಾಡಗೌಡ.—1960ರಿಂದ ಹಿಡಿದು ಇಲ್ಲಿಯವರೆಗೆ ರೀ-ಕನ್‌ಸಿಲಿಯೇಷನ್ ಮಾಡುವುದು ಇದೆ. ಆ ಬಗ್ಗೆ ನಾವು ಆರ್ಡರ್ ಮಾಡಿದ್ದೇವೆ. ಆದು ಅದ ಮೇಲೆ ಪೂರ್ತಾ ಚಿತ್ರ ಬರುತ್ತದೆ.

ಶ್ರೀ ಸಿ. ಕೆ ರಾಜಯ್ಯಶೆಟ್ಟಿ.—ಈ ವ್ಯವಹಾರದಲ್ಲಿ ಏನಾದರೂ ನಷ್ಟವಾಗಿದ್ದರೆ ಅದನ್ನು ಸರ್ಕಾರದವರು ತುಂಬಿಕೊಡುತ್ತಾರೆಯೇ ?

ಶ್ರೀ ಪಿ. ಎಂ. ನಾಡಗೌಡ.—ತುಂಬಿಕೊಡುವುದು ಅಥವಾ ಬಿಡುವುದು ಸರ್ಕಾರದ ಕೆಲಸ. ಆವರು ಗೊಬ್ಬರ ಮಾರಾಟದ ಕೆಲಸ ಮಾಡಿದ್ದಾರೆ. ರೀಕನಸಿಲಿಯೇಷನ್ ಆಗಬೇಕಾಗಿದೆ, ಆದು ಅದಮೇಲೆ ಯಾವುದನ್ನೂ ವಿಚಾರ ಮಾಡಬೇಕಾಗುತ್ತದೆ, ಈಗ ಎನೂ ಹೇಳುವುದಕ್ಕೆ ಬರುವುದಿಲ್ಲ

Sri C K. RAJAIAH SHETTY.—Apart from the manure loss, is it not a fact that in every deal it has lost from Rs. 1 to 7 lakhs ?

ಶ್ರೀ ಪಿ. ಎಂ. ನಾಡಗೌಡ.—ಗೊಬ್ಬರ ಮಾರಾಟದ ಬಗ್ಗೆ ಇಲ್ಲಿ ವಿವರಗಳನ್ನು ಕೊಡರಾಗಿದೆ. ಬೇರೆ ಮಾರಾಟದ ಬಗ್ಗೆ ವಿವರಗಳು ಬೇಕಾದರೆ ಆ ಬಗ್ಗೆ ಬೇರೆ ಪ್ರಶ್ನೆ ಕೇಳಿದರೆ ಉತ್ತರ ಒದಗಿಸಲಾಗುತ್ತದೆ

Sri A. R. BADRINARAYAN.—Has Government gone into the question as to why there has been such a loss in spite of the fact that there has been a turnover to the extent of crores of ruppees ?

ಶ್ರೀ ಪಿ. ಎಂ. ನಾಡಗೌಡ.—ರಾಸ್ ಆಗಿದೆ ಅಥವಾ ಇಲ್ಲ ಎಂಬುದನ್ನು ಈಗ ಹೇಳುವುದಕ್ಕೆ ಬರುವುದಿಲ್ಲ. ರೀಕನ್‌ಸಿಲಿಯೇಷನ್ ಆದಮೇಲೆ ಏನಾಗಿದೆ ಎಂಬ ಪೂರ್ಣ ಚಿತ್ರ ಗೊತ್ತಾಗುತ್ತದೆ. ಈಗ ರಾಸ್ ಆಗಿದೆ ಎಂದು ಹೇಳುವುದಕ್ಕೆ ಬರುವುದಿಲ್ಲ.

ಶ್ರಿ ಸಿ. ಕೆ. ರಾಜಯ್ಯ ಶೆಟ್ಟಿ.—ಈ ಸಂಘದ ಅಧ್ಯಕ್ಷರು ಎಲ್ಲ ವ್ಯವಹಾರಗಳನ್ನು ಕೂಡ ಮಾಡಿ ಲಕ್ಷಾಂತರ ರೂಪಾಯಿಗಳ ಕಮೀಷನ್ ಪಡೆದಿದ್ದಾರೆ. ಆವರ ಮನೆಯನ್ನು ಸರ್ಚ್ ಮಾಡಿದರೆ ಹತ್ತು ಲಕ್ಷ ರೂಪಾಯಿಗಳಷ್ಟು ಹಣ ಸಿಗುತ್ತದೆ, ಆದ್ದರಿಂದ ಅವರ ಮನೆಯನ್ನು ಸರ್ಚ್ ಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಸರ್ಕಾರದ ಮಾಹಿತಿ ಪ್ರಕಾರ ಈ ಸಂಘದವರು ಗೊಬ್ಬರ ಮಾರಾಟ ಒಂದನ್ನು ಬಿಟ್ಟು ಎರಡನೆಯ ಕೆಲಸ ಮಾಡಿಲ್ಲ. ಸರ್ಕಾರದ ಕೆಲಸವನ್ನು ಈ ಸೊಸೈಟಿ ಮೂಲಕ ಮಾಡಿಸಲಾಗಿದೆ. ಇಂತಿಂಥ ವ್ಯವಹಾರಗಳನ್ನು ಮಾಡಿದ್ದಾರೆ ಎಂಬುದನ್ನು ಮಾನ್ಯ ಸದಸ್ಯರು ಹೇಳಿದರೆ ಆ ಬಗ್ಗೆ ವಿಚಾರಣೆ ಮಾಡಬಹುದು. ಆದರೆ ಈಗ ಏನೂ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಜಿ. ದುಗ್ಗಪ್ಪ.—ಆರು ಲಕ್ಷ ರೂಪಾಯಿಗಳವರೆಗೆ ನಷ್ಟವಾಗಿರುವುದು ಗೊಬ್ಬರ ಮಾರಾಟ ಒಂದರಿಂದಲೇ ಅಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಗೊಬ್ಬರ ಮಾರಾಟದಿಂದ ಇಷ್ಟೊಂದು ಹಣ ನಷ್ಟವಾಗಿದೆ ಎಂದು ಈಗ ಹೇಳುವುದಕ್ಕೆ ಬರುವುದಿಲ್ಲ. ಪ್ರೈಮರಿ ಸೊಸೈಟಿಗಳಲ್ಲಿ ಗೊಬ್ಬರ ಸ್ಟಾಕ್ ಇನ್ನೂ ಇದೆ. ಆಕೌಂಟ್ಸ್ ರೀಕನ್‌ಸಿಲಿಯೇಷನ್ ಆದ ಮೇಲೆ ಯಾವುದೂ ಪೂರ್ಣ ಚಿತ್ರ ಹೊರ ಬರುತ್ತದೆ.

ಶ್ರೀ ಐ. ಸೋಮಶೇಖರಪ್ಪ.—ಈ ವ್ಯವಹಾರದ ಬಗ್ಗೆ ಸರ್ಕಾರದವರು ಷೆಡ್ಯೂಲ್ ಬ್ಯಾಂಕಿನಿಂದ ಪಡೆದ ಹಣಕ್ಕೆ ಜಾಮೀನು ನೀಡಿರುವುದರ ಜೊತೆಗೆ, ಆ ಹಣಕ್ಕೆ ಬಡ್ಡಿ ಕೊಟ್ಟಿದ್ದು ನಿಜ ವಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಷೆಡ್ಯೂಲ್ ಬ್ಯಾಂಕಿನಿಂದ ಪಡೆದ ಹಣಕ್ಕೆ ಬಡ್ಡಿ ಕೊಟ್ಟಿದ್ದು ಖರೆ ಇದೆ.

Sri B. P. GANGADHAR.—These are book accounts and the real accounts are not there. Have the Government enquired into the matter ?

ಶ್ರೀ ಪಿ. ಎಂ. ನಾಡಗೌಡ.—ಅವರ ಕಡೆ ಇನ್ನೂ ಗೊಬ್ಬರ ಇದೆ. ಅದನ್ನು ಅವರು ಪ್ರೈಮರಿ ಸೊಸೈಟಿಗಳಿಗೆ ವಾರಾಟ ಮಾಡಲು ಕೊಡುತ್ತಿದ್ದಾರೆ. ಈ ಬಗ್ಗೆ ಪೂರ್ಣವಾಗಿ ಅಕೌಂಟ್ಸನ್ನು ರೀಕನ್‌ಸಿಲಿಯೇಷನ್ ಮಾಡಿದಮೇಲೆ ರಿಯರ್ ಅಕೌಂಟ್ಸ್ ನಭೆಯ ಮುಂದೆ ಇಡುವುದಕ್ಕೆ ಅವಕಾಶವಾಗುತ್ತದೆ.

Loans given to Non-Members by the President of Besalkoppa Large Scale Joint-Agricultural Co-operative Society

67. Sri M. NAGAPPA (Raichur).—

Will the Minister for Development be pleased to state :—

(*a*) whether it is a fact that the President of Bisalakop Group Large-scale Joint Agricultural Co-operative Society has given loan of thousands of rupees to non-members, by misusing his powers ;

(*b*) if so, the action they have proposed to take in this behalf (from 1966 onwards) ;

(*c*) whether it is a fact that the President of the said Co-operative Society has given more than Rs. 1,00,000 to four members as loan ;

(*d*) if so, the action taken later on ?

Sri B. L. GOWDA (Deputy Minister for Co-operation).—

(*a*) Granted for a few persons.

(*b*) Loans given have been recovered fully. Instructions have been issued to the said Society, not to give loans to non-members henceforward.

(*c*) No.

(*d*) Does not arise.

ಶ್ರೀ ಎಂ. ನಾಗಪ್ಪ.—(ಅ) ಪ್ರಶ್ನೆಗೆ ಉತ್ತರವಾಗಿ ಕೆಲವರಿಗೆ ಮಾತ್ರ ಕೊಟ್ಟಿರುತ್ತಾರೆ ಎಂದು ಹೇಳಲಾಗಿದೆ. ಕೆಲವರು ಅಂದರೆ ಎಷ್ಟು ಜನ, ಮತ್ತು ಅವರು ಯಾರು ಯಾರು ಎಂಬುದನ್ನು ಹೇಳುತ್ತೀರಾ, ಎಷ್ಟೆಷ್ಟು ಹಣವನ್ನು ಕೊಡಲಾಗಿತ್ತು, ಮತ್ತು ಕೊಟ್ಟ ಹಣಕ್ಕೆ ೮ ಪರ್‌ಸೆಂಟ್ ಇಂಟರೆಸ್ಟ್ ಹಾಕಿದ್ದು ನಿಜವೇ ?

†ಶ್ರೀ ಬಿ. ಎಲ್. ಗೌಡ.—ಇಬ್ಬರಿಗೆ ಕೊಡಲಾಗಿದೆ. ಒಬ್ಬರ ಹೆಸರು ನಾಗೇಶ ಹರಿನಾಯಕ್ ಎಂಕಾಂಬಿ, ಇವರಿಗೆ 13,878 ರೂಪಾಯಿಗಳನ್ನು ಕೊಡಲಾಗಿತ್ತು, ಇನ್ನೊಬ್ಬರ ಹೆಸರು, ರಘುನಾಥಪಾಂಡುರಂಗನಾಯಕ್, ಇವರಿಗೆ 1,500 ರೂಪಾಯಿಗಳನ್ನು ಕೊಡಲಾಗಿತ್ತು. ಈ ಹಣದ ಮೇಲೆ ಬೇರೆಯವರಿಗೆ ಹಾಕಲಾಗುವಂತೆ ಇಂಟರೆಸ್ಟ್ ಹಾಕಲಾಗಿತ್ತು.